**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1033/23**

ಪ್ರಾಸಾ6
ಚಾಸಾ8

ಸಾಕ್ಷಿಯ ಹೆಸರುಃ ಸುನಿತಾ
ತಂದೆ /ಗಂಡನ ಹೆಸರು ಃ ರವಿಕುಮಾರ್
ವಯಸ್ಸು ಃ 45
ಉದ್ಯೋಗ ಃ ಗೃಹಿಣಿ
ವಾಸ ಸ್ಥಳ ಃ ಅರಿಶಿಣಗುಪ್ಪೆ ಗ್ರಾಮ , ಕುಶಾಲನಗರ.

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 11.03.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನನಗೆ ಆರೋಪಿಯ ಪರಿಚಯ ಇದೆ . ಚಾಸಾ 1 ನನ್ನ ಗಂಡ . ದಿಃ 23.06.2023 ರಂದು ನನ್ನ ಗಂಡ ಚಾಸಾ 1 ರವರು ಶುಂಠಿ ವ್ಯವಸಾಯಕ್ಕೆಂದು ಅರಕಲಗೊಡು ಗೆ ಹೋಗಿ ವಾಪಸ್ಸು ರಾತ್ರಿ 8.45 ಗಂಟೆಗೆ ನಮ್ಮ ಮನೆಯ ಗೇಟ್ ಬಳಿ ಬಂದಾಗ ಆರೋಪಿ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ . ಅವರು ಜೊರಾಗಿ ನನ್ನ ಹೆಸರು ಕೂಗಿ ಕಿರುಚಿಕೊಂಡಿದ್ದು ನಾನು ಮತ್ತು ಮಗ ಚಾಸಾ 9 ರವರು ಹೋಗಿ ನೋಡಲಾಗಿ ನಮ್ಮನ್ನು ನೊೀಡದ ಆರೊೀಪಿ ಬೈಕನಿಂದ ಹೊರಟು ಹೋಗಿರುತ್ತಾರೆ . ಆರೊೀಪಿ ಬೈಕ್ ಸಂ ಕೆ ಎ 12 ಕ್ಯೂ 1470 ಆಗಿರುತ್ತದೆ. ಚಾಸಾ 1 ರವರಿಗೆ ತಲೆಗೆ ಗಾಯವಾಗಿ ರಕ್ತ ಸೋರುತ್ತಿತ್ತು . ನಂತರ ನಾವು ಮನೆಗೆ ಕರೆದುಕೊಂಡು ಉಪಚರಿಸಿ ಚಾಸಾ 10 ರವರೊಂದಿಗೆ ಅವರ ಕಾರಿನಲ್ಲಿ ಕುಶಾಲನಗರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇನೆ . ಚಾಸಾ 1 ರವರು ಚಿಕಿತ್ಸೆ ಪಡೆಯುವಾಗ ಪೋಲಿಸರು ಬಂದಿದ್ದು ನನ್ನ ಗಂಡ ಹೇಳಿಕೆ ನೀಡಿರುತ್ತಾರೆ . ಚಾಸಾ 1 ರವರು ಆರೋಪಿಗೂ ಹಾಗೂ ತನಗೂ ವಾಲಿಬಾಲ್ ಆಟದ ವೈಷಮ್ಯದಿಂದ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿರುತ್ತಾರೆ . ಆರೋಪಿ ಚಾಸಾ 1 ರವರನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುವ ಬಗ್ಗೆ ತಿಳಿಸಿರುತ್ತಾರೆ .

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಈಗ್ಗಾಗಲೆ ಮು ಮಾ 1 ಎಂದು ಗುರುತಿಸಲಾಗಿದೆ .

ಪಾಟಿ ಸವಾಲುಃ ವಕೀಲರು ಸಮಯಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.